ರುದ್ರೇಶನ ಕಣ್ಸನ್ನೆ ಅರಿತ ಕಾನ್‌ಸ್ಟೆಬಲ್, ಲೂಸಿಯ ತಂದೆಯನ್ನು ಅಲ್ಲಿಂದ ಕರೆದೊಯ್ಯಲು ಅವರ ಕೈಹಿಡಿದು ಎಳೆದ.

"ನಿಧಾನ... ವಯಸ್ಸಾಗಿದೆ ಅವರಿಗೆ" ಎಂದ ಬಿಜು.

"ಸರ್, ಇವನನ್ನು ಬಿಡಬೇಡಿ... ಇವನೇ ಮಾಡಿರುವುದು... ನೀವು ಇವನನ್ನು ಬಿಟ್ಟರೆ ನಾನು ಕಮಿಷನರ್ ಬಳಿಗೆ ಹೋಗುತ್ತೇನೆ" ಎಂದು ಏನೇನೋ ಕೂಗಾಡುತ್ತಾ ಹೊರನಡೆದ.

"ಏನೇನೋ ಮಾತಾಡುತ್ತಿದ್ದಾನೆ ಬುದ್ಧಿಗೇಡಿ ಮುದುಕ..." ಡಿಮೆಲೋ ಸಿಟ್ಟಿನಿಂದ ಕೂಗಿದ.

"ನೀವು ಸುಮ್ಮನಿರಿ. ಬಿಜು ಮಾತಾಡಲಿ. ನಿಮ್ಮ ಮಾವ ಹೇಳಿದ್ದರ ಬಗ್ಗೆ... ಯಾರು ಆ ಹುಡುಗಿ? ಏನು ನಿಮಗೂ ಅವಳಿಗೂ ಸಂಬಂಧ?"

ಬಿಜು ತನ್ನ ಕುರ್ಚಿಯಲ್ಲಿ ಕುಳಿತುಕೊಂಡು, ಟೇಬಲ್ ಮೇಲಿದ್ದ ನೀರನ್ನು ಕುಡಿಯುತ್ತಾ, "ನೀವೂ ನನ್ನ ಮೇಲೆ ಅನುಮಾನ ಪಡುತ್ತಿದ್ದೀರಾ?" ಎಂದು ಕೇಳಿದ.

"ಅನುಮಾನವನ್ನೇ ಪಡಬಾರದು ಅಂದರೆ ಕೇಸ್ ಮುಂದುವರೆಯುವುದು ಹೇಗೆ? ನಿಮ್ಮ ಪತ್ನಿಯದು ಅಸಹಜ ಸಾವು. ಅವರ ತಂದೆ ನಿಮ್ಮ ಮೇಲೆ ದೂರಿದ್ದಾರೆ. ಅನುಮಾನ ಸಹಜ."

"ನಮ್ಮ ಮಾವ ಹೇಳಿದರು ಅಂತ ನನ್ನ ಮೇಲೆಯೇ ಅನುಮಾನ ಪಡೋದಾ?..."

"ಯಾರು ಹೇಳಿದರು ಅನ್ನುವುದು ಮುಖ್ಯವಲ್ಲ ಇಲ್ಲಿ... ಏನು ಹೇಳಿದರು ಅನ್ನುವುದು ಮುಖ್ಯ."

"ಕೊಲೆ ನಡೆದಾಗ ನಾನು ಅಲ್ಲಿ ಇರಲೇ ಇಲ್ಲ. ಯಾರನ್ನು ಬೇಕಾದರೂ ವಿಚಾರಿಸಿ..." ಬಿಜು ಗಾಬರಿಯಿಂದ ನುಡಿದ.

"ನನ್ನ ಪ್ರಶ್ನೆಗೆ ಇದು ಉತ್ತರವಲ್ಲ. ಎಷ್ಟೋ ಕೇಸುಗಳಲ್ಲಿ ಗಂಡಹೆಂಡತಿ ಜಗಳವೇ ಕೊಲೆಗೆ ಕಾರಣವಾಗಿದೆ" ಮತ್ತೆ ವ್ಯಂಗ್ಯವಾಡಿದ ರುದ್ರೇಶ್.

"ಹಾಗಾದರೆ ಪ್ರಪಂಚದ ಎಲ್ಲಾ ಗಂಡಂದಿರೂ ತಮ್ಮ ತಮ್ಮ ಹೆಂಡತಿಯನ್ನು ಕೊಲೆಮಾಡಬೇಕು. ಯಾಕೆಂದರೆ ಗಂಡಹೆಂಡತಿ ಜಗಳ ಎಲ್ಲಾ ಸಂಸಾರದಲ್ಲಿಯೂ ಇರುತ್ತದೆ." ಹಟ ಬಿಡದವನಂತೆ ಕೇಳಿದ ಬಿಜು.

"ಆ ಜಗಳ, ಅವರ ಮಧ್ಯದಲ್ಲಿ ಪ್ರವೇಶಿಸಿದ ಇನ್ನೊದು ಹೆಣ್ಣಿನ ಬಗ್ಗೆಯಾದರೆ ಆ ಸಾಧ್ಯತೆ ಹೆಚ್ಚಿರುತ್ತದೆ." ಮೊನಚಾಗಿ ಹೇಳಿದ ರುದ್ರೇಶ್.

ಬಿಜು ಮೌನವಾದ. ರುದ್ರೇಶ್ ಕೊಂಚ ಸಮಾಧಾನದ ಧ್ವನಿಯಲ್ಲಿ, "ನಿಮ್ಮ ಮೇಲೆ ಆರೋಪ ಹೊರಿಸುತ್ತಿಲ್ಲ. ಸತ್ಯ ಏನು ಅಂತ ತಿಳಿಯಲು ಪ್ರಯತ್ನಿಸುತ್ತಿದ್ದೇವೆ. ಲೂಸಿ ಕೊಲೆಗೆ ಬೇಕಾದ ಸ್ಟ್ರಾಂಗ್ ಮೋಟಿವ್ ಇರುವುದು ನಿಮ್ಮ ಬಳಿ ಮಾತ್ರ... ನೆನಪಿರಲಿ".

"ನೀವು ಏನು ಹೇಳ್ತಾ ಇದ್ದೀರಿ ಅಂತ ನಿಮಗೆ ಅರಿವಿದೆಯಾ ಸರ್. ಲೂಸಿ ಸಾವಿನ ಸಮಯದಲ್ಲಿ ಬಿಜು ಅಲ್ಲಿ ಇರಲೇ ಇಲ್ಲ. ಬೇಕಿದ್ದರೆ ಫೋನ್ ಲೋಕೇಶನ್ ತರಿಸಿ ನೋಡಿ, ಪೆಟ್ರೋಲ್ ಬಂಕ್‌ನ ಕ್ಯಾಮರಾಗಳ ಫುಟೇಜ್ ಪರೀಕ್ಷಿಸಿ, ಊಟ ಮಾಡಿದ ದಾಬಾದಲ್ಲಿ, ಬೇಗ ಸರ್ವೀಸ್ ಮಾಡಲಿಲ್ಲ ಅಂತ ಬಿಜು ಗಲಾಟೆ ಮಾಡಿದ್ದ, ಅದನ್ನು ಬೇಕಾದರೆ ವಿಚಾರಿಸಿ." ಡಿಮೆಲೋ ಎತ್ತರದ ಧ್ವನಿಯಲ್ಲಿ ನುಡಿದ.

ಅವನ ಮಾತುಗಳನ್ನು ತಡೆಯುತ್ತಾ ಬಿಜು—

"ಸರ್, ನಾನೊಬ್ಬ ಅನಾಥ. ತಂದೆತಾಯಿ ಕೇರಳದ ಕಡೆಯವರಂತೆ. ನಾನು ಇಲ್ಲಿಯೇ ಬೆಂಗಳೂರಿನಲ್ಲಿ ಚರ್ಚ್‌ನಲ್ಲಿಯೇ ಬೆಳೆದು ಓದಿ ದೊಡ್ಡವನಾಗಿದ್ದು. ಲೂಸಿಯ ತಂದೆ, ರಾಬರ್ಟ್ ಡಿ'ಕುನಾ ಅವರ ಪೈಪ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿದ್ದೆ. ಅವರೇ ನನ್ನ ಕೆಲಸ, ಒಳ್ಳೆಯತನ ನೋಡಿ, ಲೂಸಿಯೊಂದಿಗೆ ನನ್ನ ಮದುವೆ ಮಾಡಿಸಿದರು. ಆದರೆ ಆಮೇಲೆ ತಿಳಿಯಿತು, ನನ್ನ ಮತ್ತು ಲೂಸಿಯ